ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 177-180
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಾಮರಾಜನಗರ ತಾಲೂಕಿನ ಶಾಸನಗಳಲ್ಲಿ ಅಗ್ರಹಾರಗಳು

**ಮಲ್ಲೇಶ್ ಕೆ**

ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

***Abstract:***

*ಅರಿಕುಠಾರ ಎಂದು ಕರೆಯಲಾಗುತ್ತಿದ್ದ ಚಾಮರಾಜನಗರವು ಪ್ರಾಕೃತಿಕವಾಗಿ ಸಮೃದ್ಧವಾಗಿರುವಂತೆ ಸಾಂಸ್ಕೃತಿಕವಾಗಿಯೂ ಅಷ್ಟೇ ಸಂಪದ್ಭರಿತ ಪ್ರದೇಶವೂ ಹೌದು. ಈ ಭಾಗದಲ್ಲಿ ದೊರೆತಿರುವ ಶಾಸನಗಳಿಂದ ಇಲ್ಲಿನ ಇತಿಹಾಸ, ರಾಜಕೀಯ, ಸಂಸ್ಕೃತಿ, ಹಾಗೂ ಆರ್ಥಿಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಹಾಗೆಯೇ ಚಾಮರಾಜನಗರ ಜಿಲ್ಲೆಯ ಶಾಸನಗಳಲ್ಲಿ ಸ್ಥಳನಾಮಗಳು ಇರುವುದನ್ನು ಕಾಣಬಹುದು. ಇಲ್ಲಿನ ಹಲವು ಗ್ರಾಮಗಳ ಮೂಲ ಹೆಸರಿನ ಸ್ವರೂಪ ನಮಗೆ ಶಾಸನಗಳಿಂದ ಮಾತ್ರ ತಿಳಿಯುತ್ತದೆ. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ತಾಲೂಕಿನ ಶಾಸನಗಳಲ್ಲಿನ ಅಗ್ರಹಾರಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ.*

***Keywords:*** *ಚಾಮರಾಜನಗರ, ಶಾಸನಗಳು, ಅಗ್ರಹಾರ, ಅರಸರು.*

## ಪೀಠಿಕೆ

ರಾಜಮಹಾರಾಜರುಗಳ ಕಾಲದಲ್ಲಿ ಚಾಮರಾಜ ನಗರ ಜಿಲ್ಲೆಯಾದ್ಯಂತ ಅನೇಕ ಅಗ್ರಹಾರಗಳು ಸ್ಥಾಪಿಸಲ್ಪಟ್ಟವು ಮತ್ತು ಅಗ್ರಹಾರಗಳಾಗಿ ಮಾರ್ಪಟ್ಟ ಊರು ಗ್ರಾಮ ನಗರ ಪಟ್ಟಣಗಳ ಹೆಸರುಗಳು ಸಹ ಬದಲಾವಣೆಗೂಂಡವು ಎಂಬುದು ಸುತ್ತಮುತ್ತಲಿನ ಪ್ರದೇಶಗಳ ಶಾಸನಗಳಿಂದ ತಿಳಿಯುತ್ತದೆ. ಚಾಮರಾಜನಗರದ ಪ್ರಮುಖ ಸ್ಥಳಗಳಲ್ಲಿ ಅಗ್ರಹಾರಗಳು ಸ್ಥಾಪನೆಗೂಂಡವು, ಚೋಳರು, ಹೋಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಅರಸರು, ಮೈಸೂರು ಒಡೆಯರ ಆಡಳಿತವದಿಯಲ್ಲಿ ಅಗ್ರಹಾರಗಳು ಹೆಚ್ಚು ಜನಪ್ರಿಯವಾದವು. ಈ ಅಗ್ರಹಾರಗಳು ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು ಅಲ್ಲದೆ ಸ್ವಯಂ ಆಡಳಿತ ಪದ್ಧತಿಯ ಮಾದರಿಗಳಾಗಿದ್ದವು, ಆಯಕಟ್ಟಿನ ಸ್ಥಳಗಳಲ್ಲಿ ಅಗ್ರಹಾರಗಳು ನೆಲೆಗೂಂಡು ಶೈಕ್ಷಣಿಕ ಪ್ರಗತಿಗೆ ಕಾರಣವಾಗಿದ್ದವು, ಧಾರ್ಮಿಕ ಪೂಜಕಾರ್ಯಗಳೂಂದಿಗೆ ಬೋಧನೆ ಮಾಡುವ ಕಾರ್ಯ ಬ್ರಾಹ್ಮಣ ಪಂಡಿತರ ನಿತ್ಯ ವೃತ್ತಿಯಾಗಿತು

## ಅಧ್ಯಯನದ ಉದ್ದೇಶಗಳು

- ಚಾಮರಾಜನಗರ ತಾಲೂಕಿನಲ್ಲಿದ್ದ ಐತಿಹಾಸಿಕ ಅಗ್ರಹಾರಗಳ ಬಗ್ಗೆ ತಿಳಿದುಕೊಳ್ಳುವುದು.
- ಅಗ್ರಹಾರಗಳ ಚರಿತ್ರೆ ಮತ್ತು ಅವುಗಳ ಸಾಮಾಜಿಕ ಕಾರ್ಯಗಳ ಬಗ್ಗೆ ತಿಳಿಯುವುದು.
- ಶೈಕ್ಷಣಿಕ, ಧಾರ್ಮಿಕ, ಮತ್ತು ರಾಜಕೀಯ ಕೇಂದ್ರಗಳಾಗಿ ಅಗ್ರಹಾರಗಳು ಹೇಗೆ ಕಾರ್ಯ ನಿರ್ವಹಿಸುತ್ತಿದ್ದವು ಎಂಬುದನ್ನ ತಿಳಿಯುವುದು.

***Please cite this article as:*** ಮಲ್ಲೇಶ್ ಕೆ. (2023). ಚಾಮರಾಜನಗರ ತಾಲೂಕಿನ ಶಾಸನಗಳಲ್ಲಿ ಅಗ್ರಹಾರಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 2(1), 177–180.

**ಚಾಮರಾಜನಗರ ತಾಲೂಕಿನ ಶಾಸನಗಳಲ್ಲಿ ಅಗ್ರಹಾರಗಳು**

ಚಾಮರಾಜನಗರ ತಾಲೂಕಿನಲ್ಲಿ ದೊರೆತಿರುವ ಅನೇಕ ಶಾಸನಗಳಲ್ಲಿ ಅಗ್ರಹಾರಗಳ ಉಲ್ಲೇಖವಿದೆ, ಈ ಅಗ್ರಹಾರಗಳು ಮುಖ್ಯವಾಗಿ ಶಿಕ್ಷಣದ ಕೇಂದ್ರಗಳಾಗಿದ್ದವು ಹಾಗೂ ಸ್ವಯಂಆಡಳಿತದ ಕೇಂದ್ರಗಳಾಗಿದ್ದವು, ಅಲ್ಲದೆ ಜನರಲ್ಲಿ ನೈತಿಕ ಮತ್ತು ಧಾರ್ಮಿಕ ಮೌಲ್ಯಗಳ ತಿಳುವಳಿಕೆಯನ್ನು ಮೂಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಅಗ್ರಹಾರಗಳಲ್ಲಿನ ಮಹಾಜನರು ದೇವಸ್ಥಾನಗಳಲ್ಲಿ ಸಭೆ ಸೇರಿ ಗ್ರಾಮಗಳ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಊರಿನ ಅಭಿವೃದ್ಧಿ, ಕೃಷಿ, ಧಾರ್ಮಿಕ ಸೇವೆಗಳು, ದೇವಸ್ಥಾನ, ಮಠ ಮಂದಿರಗಳ ಅಭಿವೃದ್ಧಿ ಮುಂತಾದ ಸೇವೆಗಳನ್ನ ಮಾಡುವುದು ಅಲ್ಲದೆ ಗ್ರಾಮಗಳ ವಿವಾದಗಳನ್ನು ಪರಿಹರಿಸುತ್ತಿದ್ದರು.

ಈ ಅಗ್ರಹಾರಗಳು ಕಲಿಕಾ ಕೇಂದ್ರಗಳಾಗಿ ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಸಂಘಟಿಸುವುದರಲ್ಲಿ ತಮ್ಮದೆ ಆದ ಮಿತಿಯೊಳಗೆ ಯಸಸ್ವಿ ಮಾಧ್ಯಮಗಳಾಗಿದ್ದವು. ಹೀಗೆ ಅಗ್ರಹಾರಗಳು ಈ ಪ್ರದೇಶದ ಸಾಮಾಜಿಕ ಪರಂಪರೆಯ ಮೇಲೆ ಪ್ರಭಾವ ಬೀರಿದ್ದವು ಇದರಿಂದ ವ್ಯಕ್ತವಾಗುವು ದೇನೆಂದರೆ ಬ್ರಾಹ್ಮಣ ಪಂಡಿತವರ್ಗದವರ ನಿಷ್ಠೆಯನ್ನು ಸಂಪಾದಿಸಿಕೊಳ್ಳಲು ಆಳುವ ವರ್ಗ ದವರು ಅಗ್ರಹಾರಗಳನ್ನು ಸ್ಥಾಪಿಸಿ ಧಾರ್ಮಿಕ ಸಂಸ್ಥೆಗಳನ್ನ ಕಟ್ಟಿ ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡುತ್ತಿದ್ದರು ಈ ಅಗ್ರಹಾರಗಳಲ್ಲಿ ವಾಸಮಾಡುತ್ತಿದ್ದವರನ್ನು ಮಹಾಜನರೆಂದು ಕರೆ ಯುತ್ತಿದ್ದರು.

ಹೊಮ್ಮ ಮತ್ತು ಆಲೂರು ಕ್ರಿ.ಶ.1295ರ ಶಾಸನದಲ್ಲಿ ಹೊಮ್ಮ ಮತ್ತು ಆಲೂರು ಗ್ರಾಮಗಳನ್ನು ವೀರ ಬಲ್ಲಾಳನ ಅನುಮತಿಯೊಂದಿಗೆ ಅಗ್ರಹಾರವನ್ನಾಗಿ ಅಭಿವೃದ್ದಿಪಡಿಸಿ *"ಅರಸುಗೂಂಡ ರಾಮ ಚತುರ್ವೇದಿಮಂಗಲ"* ಎಂದು ಹೆಸರಿಡಲಾಯಿತು. ಅದೇ ವರ್ಷದ ಇನ್ನೊಂದು ಶಾಸನವು ಅರಸುಗೂಂಡ ರಾಮ ಚತುರ್ವೇದಿಮಂಗಲವನ್ನು "ಸರ್ಬ್ಬನಮಸ್ಯದ ಅಗ್ರಹಾರ" ಎಂದು ಸಂಭೋದಿಸಲಾಗಿದೆ. ಹೊಮ್ಮ ಗ್ರಾಮದ ಕ್ರಿ.ಶ. 1380ರ ವಿಜಯನಗರ ಕಾಲದ ಶಾಸನವು ಹೊಮ್ಮ ಗ್ರಾಮವನ್ನು *"ಸರ್ವಜ್ಞ ವಿಷ್ಣುಪುರ"* ಎಂದು *"ಅಕಳಾಂಕ ಚತುರ್ವೇದಿ ಮಂಗಲ"* ಎಂದು ಕರೆಯಲಾಗಿದೆ.

ವಿದ್ಯಾನಿಧಿ ಪ್ರಸನ್ನ ಕೇಶವಾಪುರ ಕ್ರಿ.ಶ.1315 ರ ಬಸವಾಪುರದ ಶಾಸನವು ಮೂರನೇ ಬಲ್ಲಾಳನ ಕಾಲಕ್ಕೆ ಸೇರಿದೆ ಈ ಶಾಸನದಲ್ಲಿ ಪೆರುಮಾಳ ಡಣ್ಣಾಯಕನ ಮಗನಾದ ಮಾದಪ್ಪ ಡಣ್ಣಾಯಕನು ವಿಧ್ಯಾನಿದಿ ಪ್ರಸನ್ನ ಕೇಶವಾಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿದನೆಂದು ಗೊತ್ತಾಗುತ್ತದೆ. ಚಾಮರಾಜನಗರ ತಾಲೂಕಿನ ಕೆಂಪನಪುರದಲ್ಲಿ ದೊರೆತಿರುವ ಕ್ರಿ.ಶ. 991 ಕ್ಕೆ ಸೇರಿದ ಶಾಸನವು ಶೈಕ್ಷಣಿಕ ದತ್ತಿಗಾಗಿ ಕಿರಿಹಿರೂರಿನಲ್ಲಿ 2 ಖಂಡುಗಗಳ ಗದ್ದೆಯನ್ನು ಮತ್ತು ನಲ್ಲಿಗುಂದದಲ್ಲಿ 1 ತೋಟ 10 ಖಂಡುಗಗಳ ಗದ್ದೆಯನ್ನು ಕೆಲ್ಲೂರಿನ ಪೋಳಿಮಯ್ಯನು ಸೋಮರಸಿ ಭಟ್ಟಾರಕನಿಗೆ ದಾನ ನೀಡಿದನೇಂದು ಉಲ್ಲೇಖಿಸುತ್ತದೆ.

ಚಾಮರಾಜನಗರದ 186ನೇ ಕ್ರಿ.ಶ. 1058 ರ ಹಳೆ ಆಲೂರಿನ ಶಾಸನವು ಆಲೂರನ್ನು ಕೊಮುಮ್ಮಾನ ಶೋಳಚ್ಚಾದಿರ ನಲ್ಲೂರು ಎಂದು ಮರುನಾಮಕರಣ ಮಾಡಿದ ಮಾಹಿತಿ ನೀಡುತ್ತದೆ. ಕ್ರಿ.ಶ. 1167ರ ಚಾಮರಾಜನಗರ 222ನೇ ಹರಳುಕೋಟೆಯ ಶಾಸನವು ಹಟ್ಟಿಲ ಗ್ರಾಮಕ್ಕೆ ಪ್ರತಿನಾಮಧೇಯವಾದ ಕೇರಳಾಂತಕ ಚತುರ್ವೇದಿ ಮಂಗಲವಾಗಿತ್ತೆಂದು ಉಲ್ಲೇಖಿಸುತ್ತದೆ. ಹೀಗೆ ಚಾಮರಾಜನಗರ ಜಿಲ್ಲೆಯಾದ್ಯಂತ ಪ್ರಮುಖ ಸ್ಥಳಗಳಲ್ಲಿ ಅಗ್ರಹಾರಗಳು ಸ್ಥಾಪನೆಗೊಂಡವು. ಹೀಗೆ ಆಳುವ ವರ್ಗ ಮತ್ತು ಅವರ ಅಧೀನ ಆಡಳಿತ ವರ್ಗದವರು ನಿರ್ಮಿಸಿದ ಅಗ್ರಹಾರಗಳು ಹಿಂದೆ ಪ್ರಸಿದ್ದವಾಗಿದ್ದವು. ಈ ಅಗ್ರಹಾರಗಳಲ್ಲಿ ವಾಸಮಾಡುತ್ತಿದ್ದವರನ್ನು

ಮಹಾಜನರೆಂದು ಕರೆಯುತ್ತಿದ್ದರು, ಇವರು ಸದಾ ಜ್ಞಾನಾರ್ಜನೆ ಹಾಗೂ ವೇದಶಾಸ್ತ್ರಗಳ ಅಧ್ಯಯನದಲ್ಲಿ ತೂಡಗುತ್ತಿದ್ದರು ದೇವಾಲಯ ಮತ್ತು ಧಾರ್ಮಿಕ ಸಂಸ್ಥೆಗಳು ಸಾಮಾನ್ಯವಾಗಿ ಅಗ್ರಹಾರಗಳಲ್ಲಿ ನಿರ್ಮಾಣಗೂಳ್ಳುತ್ತಿದ್ದುದರಿಂದ ಅಗ್ರಹಾರಗಳ ಕಾರ್ಯಕ್ಷೇತ್ರ ವಿಸ್ತಾರವಾಗತೂಡಗಿತು. ಚೋಳರು ಮುಡಿಗೊಂಡ ಚೋಳ ಮಂಡಲದಲ್ಲಿ ದೇವಾಲಯಗಳನ್ನು ನಿರ್ಮಿಸಿ ಅಗ್ರಹಾರಗಳನ್ನು ಸ್ಥಾಪಿಸಿ ಬ್ರಾಹ್ಮಣರನ್ನು ಧಾರ್ಮಿಕವಾಗಿ ಪೋಷಿಸುವ ಪರಂಪರೆಯನ್ನು ಆರಂಭಿಸಿದರು. ಹೀಗೆ ಚತುರ್ವೇದಿಗಳಾದ ಋಗ್ವೇದಿಗಳು, ಸಾಮವೇದಿಗಳು, ಯಜುರ್ವೇದಿಗಳು, ಹಾಗೂ ಅಥರ್ವಣವೇದಿಗಳು ನೆಲೆಗೂಳ್ಳುವಂತೆ ಮಾಡುತ್ತಿದ್ದರು. ನಾಲ್ಕೂ ವೇದಗಳನ್ನು ಬಲ್ಲ ತಮಿಳು ಬ್ರಾಹ್ಮಣ ಪಂಡಿತರನ್ನು ಪ್ರತ್ಯಕ್ಷವಾಗಿ ಬೆಂಬಲಿಸುತ್ತಿದ್ದರು ಆದುದರಿಂದಲೆ ಚೋಳರು ಸ್ಥಾಪಿಸಿದ ಅಗ್ರಹಾರಗಳನ್ನು ಚತುರ್ವೇದಿ ಮಂಗಲಗಳೆಂದು ಕರೆಯುತ್ತಿದ್ದರು. ಅಗ್ರಹಾರಗಳಲ್ಲಿ ನೆಲೆಗೂಂಡ ತಮಿಳು ಬ್ರಾಹ್ಮಣರು ದೇವಾಲಯಗಳು ಹಾಗೂ ಭೂಒಡೆತನಗಳನ್ನು ಕ್ರಮೇಣ ತಮ್ಮ ಕೈಗೆ ತೆಗೆದುಕೂಂಡರು.

ಚಾಮರಾಜನಗರ 146 ಕೆಂಪನಪುರ ಶಾಸನವು ರಾಜೇಂದ್ರ ಚೋಳನಿಗೆ ಸಂಬಂಧಿಸಿದ್ದು (ಕ್ರಿ.ಶ. 1018–1054) ಕೆಂಪನಪುರವನ್ನು ವೇಲೂರು ಅಥವಾ ರಾಜಾಧಿರಾಜ ಚತುರ್ವೇದಿ ಮಂಗಲ ಅಗ್ರಹಾರವಾಗಿ ಪರಿವರ್ತಿಸಿದ್ದನ್ನು ವಿವರಿಸುತ್ತದೆ. ಮುಂದುವರೆದು ವಿವಿದ ವರ್ತಕ ಸಂಘಗಳಾದ ನಾನಾದೇಶಿ ಹಾಗೂ ಅಯ್ಯಾವೂಳೆ ಐನೂರ್ವರ್ ಸೇರಿಕೂಂಡು ಎರಿವೀರಪಟ್ಟಣಂ ಎಂಬ ವ್ಯಾಪಾರ ಕೇಂದ್ರವನ್ನು ಅಭಿವೃದ್ಧಿಗೊಳಿಸಿದ ಮಾಹಿತಿಗಳು ದೂರಕುತ್ತವೆ. ಕ್ರಿ.ಶ 1067ರಲ್ಲಿ ಕೋಗಳಿ 500ರಲ್ಲಿನ ನೀರ್ಗುಂದ ಹಳ್ಳಿಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ತಮಿಳುನಾಡಿನಿಂದ ವೇದಗಳು, ವೇದಾಂಗಗಳು ಮತ್ತು ಶಾಸ್ತ್ರಗಳಲ್ಲಿ ಪಾರಂಗತರಾದ 300 ಬ್ರಾಹ್ಮಣರನ್ನು ಕರೆತಂದು ನೆಲೆಗೂಳಿಸಿದರು.

ಚಾಮರಾಜನಗರ ಭಾಗದಲ್ಲಿ ಕಂಡು ಬರುವ ಅನೇಕ ಅಗ್ರಹಾರಗಳು ಚೋಳರ ಕಾಲದಲ್ಲಿ ನಿರ್ಮಾಣಗೂಂಡು ತಮಿಳುನಾಡಿನಿಂದ ವಿಶೇಷವಾಗಿ ತಮಿಳು ಭಾಷೆ ಮಾತನಾಡುವ ಬ್ರಾಹ್ಮಣರನ್ನು ಕರೆತಂದು ಇಲ್ಲಿ ನೆಲೆಸಲು ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೂಡಲಾಯಿತು. ಇದರಿಂದ ತಮಿಳು ಭಾಷೆ ಹಾಗೂ ಸಾಹಿತ್ಯದೂಂದಿಗೆ ಶಾಸನಗಳನ್ನು ತಮಿಳು ಭಾಷೆ ಮತ್ತು ಲಿಪಿಯಲಿ ಬರೆಯಿಸುವ ಪದ್ಧತಿ ವ್ಯಾಪಕವಾಗಿ ಪ್ರಚಾರಗೂಂಡಿತು. ಚೋಳರ ನಂತರ ಅಧಿಕಾರಕ್ಕೆ ಬಂದ ಹೊಯ್ಸಳರು ಸಹ ಚತುರ್ವೇದಿ ಮಂಗಲಗಳೆಂಬ ಹೆಸರಿನ ಅಗ್ರಹಾರಗಳನ್ನು ಮುಂದುವರೆಸಿದರು, ಇದಕ್ಕೆ ಕಾರಣ ಚೋಳರ ಕಾಲದಲ್ಲಿ ವಲಸೆ ಬಂದ ತಮಿಳು ಬ್ರಾಹ್ಮಣ ಅಧಿಕಾರಿಗಳೆ ಹೊಯ್ಸಳರ ಕಾಲದಲ್ಲಿಯು ಮುಂದುವರೆದು ಚೋಳ ಪರಂಪರೆಯು ಶಾಸ್ವತವಾಗಿ ಕನ್ನಡ ನಾಡಿನಲ್ಲಿ ಉಳಿದುಕೊಳ್ಳುವಂತ ' ಮಾಡುವುದರಲ್ಲಿ ಸಂಪೂರ್ಣ ಯಸಸ್ವಿಯಾದರು.

**ಉಪಸಂಹಾರ**

ಈ ಲೇಖನದಲ್ಲಿ ಪ್ರಮುಖವಾಗಿ ಚಾಮರಾಜ ನಗರ ತಾಲೂಕಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಅಗ್ರಹಾರಗಳ ಬಗ್ಗೆ ವಿವರಣೆ ನೀಡಲಾಗಿದೆ. ಪ್ರಾಚೀನ ಕಾಲದಲ್ಲಿ ಅಗ್ರಹಾರಗಳು ಹೇಗೆ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದವು ಮತ್ತು ಅವುಗಳು ಯಾವ ಉದ್ದೇಶದಿಂದ ಸ್ಥಾಪನೆಯಾದವು ಎಂಬುದನ್ನು ತಿಳಿಸಲಾಗಿದೆ ಹಾಗೆಯೆ ಶಿಕ್ಷಣ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕವಾಗಿ ಅಗ್ರಹಾರಗಳ ಪಾತ್ರವನ್ನು ತಿಳಿಸಲಾಗಿದೆ.

**ಆಕರ ಗ್ರಂಥಗಳು**


- *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–3* (1974). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಯ.

- *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ-4* (1975). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಯ.
- ಚಿದಾನಂದ ಮೂರ್ತಿ.ಎಂ. (1996). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್.
- ಮಲೆಯೂರು ಗುರುಸ್ವಾಮಿ. (ಪ್ರ.ಸಂ). (2007). *ಹೊನ್ನುಹೊಳೆ.* ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್.
- ಶ್ರೀನಿವಾಸನ್ ಪಿ.ಆರ್. (1959). *ದಕ್ಷಿಣ ಭಾರತದ ದೇವಾಲಯಗಳು.* ಭಾರತೀಯ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ.